**ಕಥಾಪ್ರಭ**

# ಬೋಧಿಸತ್ವನ ಆದರ್ಶ

(ಬೌದ್ಧ ಜಾತಕ ಕಥೆ)

ಹಿಂದೆ ವಾರಾಣಸಿಯಲ್ಲಿ ಬ್ರಹ್ಮದತ್ತ ರಾಜ್ಯಭಾರ ಮಾಡುತ್ತಿರುವಾಗ ಬೋಧಿಸತ್ವ ಜಿಂಕೆಯಾಗಿ ಹುಟ್ಟಿದ. ಅದರದು ಚಿನ್ನದ ಬಣ್ಣ. ಅದು ಐನೂರು ಮೃಗಗಳೊಂದಿಗೆ ಕಾಡಿನಲ್ಲಿ ವಾಸಿಸುತ್ತಿತ್ತು. ಅದು 'ನ್ಯಗ್ರೋಧ ರಾಜ' ಎಂದೇ ಪ್ರಸಿದ್ಧವಾಗಿತ್ತು. ಇದಕ್ಕಿಂತ ಸ್ವಲ್ಪದೂರ ದಲ್ಲಿಯೇ ಇನ್ನೊಂದು ಜಿಂಕೆಗಳ ಗುಂಪು ಇತ್ತು. ಅದರ ರಾಜನಿಗೂ ಚಿನ್ನದ ಬಣ್ಣ ಇತ್ತು. ಅದನ್ನು 'ಶಾಖಾಮೃಗ' ಎಂದು ಕರೆಯುತ್ತಿದ್ದರು.

ವಾರಾಣಸಿಯ ರಾಜನಿಗೆ ಜಿಂಕೆ ಮಾಂಸ ಎಂದರೆ ತುಂಬ ಇಷ್ಟ. ಅವನು ಪ್ರತಿನಿತ್ಯ ಬೇಟೆಗೆ ಹೋಗುತ್ತಿದ್ದ. ಅವನ ಪ್ರಜೆಗಳು ಹೀಗೆ ಯೋಚಿಸಿದರು: "ಈ ರಾಜ ದಿನವೂ ನಮ್ಮನ್ನು ಬೇಟೆಗೆ ಬರುವಂತೆ ಒತ್ತಾಯಿಸುತ್ತಾನೆ. ಆದುದರಿಂದ, ನಾವೆಲ್ಲರೂ ಸೇರಿ ಉದ್ಯಾನವನದಲ್ಲಿ ಹುಲ್ಲು ಬೆಳೆಸಿ ನೀರನ್ನಿಟ್ಟು, ಜಿಂಕೆಗಳನ್ನೆಲ್ಲ ಅಲ್ಲಿ ಬಂಧಿಸಿ, ರಾಜನಿಗೆ ಏಕೆ ವಹಿಸಿಕೊಡಬಾರದು?" ಅದರಂತೆಯೆ ಎಲ್ಲರೂ ಸೇರಿ ಉದ್ಯಾನವನದಲ್ಲಿ ಜಿಂಕೆಗಳಿಗಾಗಿ ಹುಲ್ಲು ಬೆಳೆಸಿದರು; ನೀರಿನ ವ್ಯವಸ್ಥೆ ಮಾಡಿದರು. ನಂತರ ಕಾಡಿಗೆ ಹೋಗಿ, ವಾದ್ಯಗಳನ್ನು ಬಾರಿಸುತ್ತ, ಆಯುಧಗಳನ್ನು ತೋರಿಸಿ ಕೋಲಾಹಲ ಮಾಡುತ್ತ, ಜಿಂಕೆಗಳನ್ನು ಉದ್ಯಾನವನದ ಹತ್ತಿರ ಅಟ್ಟಿಸಿಕೊಂಡು ಬಂದರು. ಅವುಗಳನ್ನು ಉದ್ಯಾನವನದೊಳಗೆ ಸೇರಿಸಿ, ಬಾಗಿಲನ್ನು ಹಾಕಿ ಬಂಧಿಸಿದರು. ನಂತರ ರಾಜನ ಬಳಿಗೆ ಬಂದು, ಹೀಗೆ ಹೇಳಿದರು: "ದೇವ! ಒಂದೇ ಸಮನೆ ಬೇಟೆಗೆ ಹೋಗುವುದರಿಂದ ನಮ್ಮ ಕೆಲಸಕಾರ್ಯಗಳಿಗೆ ತೊಂದರೆಯಾಗುತ್ತಿದೆ. ನಾವು ಕಾಡಿನಿಂದ ಜಿಂಕೆ ಗಳನ್ನು ಓಡಿಸಿಕೊಂಡು ಬಂದು ನಮ್ಮ ಉದ್ಯಾನವನದಲ್ಲಿ ಕೂಡಿಟ್ಟಿದ್ದೇವೆ. ಇಂದಿನಿಂದ ತಾವು ಅವುಗಳ ಮಾಂಸವನ್ನು ತಿನ್ನಿ."

ರಾಜನು ಅವರ ಮಾತು ಕೇಳಿ ಉದ್ಯಾನವನಕ್ಕೆ ಬಂದನು. ಜಿಂಕೆಗಳನ್ನು ನೋಡುತ್ತಿರುವಾಗ ಅವುಗಳಲ್ಲಿ ಎರಡು ಹೊಂಬಣ್ಣದ ಜಿಂಕೆಗಳನ್ನು ನೋಡಿದನು. ಅವುಗಳಿಗೆ ಅಭಯದಾನ ಮಾಡಿದನು. ಯಾವಾಗಲಾದರೊಮ್ಮೆ ತಾನೇ ಹೋಗಿ ಒಂದು ಜಿಂಕೆಯನ್ನು ಹೊಡೆದು ತರುತ್ತಿದ್ದನು ಅಥವಾ ಒಮ್ಮೊಮ್ಮೆ ಅವನ ಅಡಿಗೆಯವನೇ ಹೋಗಿ ಜಿಂಕೆಯನ್ನು ಹೊಡೆದು ತರುತ್ತಿದ್ದನು. ಜಿಂಕೆಗಳು ಬಿಲ್ಲನ್ನು ನೋಡುತ್ತಿದ್ದಂತೆಯೇ ಮರಣಭಯದಿಂದ ಹೆದರಿ ಓಡುತ್ತಿದ್ದವು. ಎರಡು ಮೂರು ಪೆಟ್ಟು ತಿಂದು ದುಃಖಿಗೊಳ್ಳುತ್ತಿದ್ದವು. ನಂತರ ಗಾಯಗೊಂಡು ಸಾವನ್ನಪ್ಪುತ್ತಿದ್ದವು. ಜಿಂಕೆಗಳು ಈ ವಿಷಯವನ್ನು ಬೋಧಿಸತ್ವನಿಗೆ ತಿಳಿಸಿದವು. ಆತನು ಇನ್ನೊಂದು ಗುಂಪಿನ ರಾಜನನ್ನು ಕರೆದು, "ಸೌಮ್ಯ! ಜಿಂಕೆಗಳು ಅಧಿಕ ಸಂಖ್ಯೆಯಲ್ಲಿ ನಾಶವಾಗುತ್ತಿವೆ. ಸಾಯುವುದು ಆವಶ್ಯಕವೇ ಆಗುವುದಾದರೆ ಇಂದಿನಿಂದ ಮೃಗಗಳನ್ನು ಬಾಣದಿಂದ ಸಾಯಿಸದಿರಲಿ. ಕತ್ತರಿಸುವ ಸ್ಥಾನಕ್ಕೆ ಜಿಂಕೆಗಳೇ ಸರದಿಯ ಮೇಲೆ ಹೋಗಲಿ. ಒಂದು ದಿನ ನನ್ನ ಗುಂಪಿನ ಒಂದು ಜಿಂಕೆಯ ಸರದಿಯಾದರೆ, ಮತ್ತೊಂದು ದಿನ ನಿನ್ನ ಗುಂಪಿನ ಮೃಗದ ಸರದಿಯಾಗಲಿ. ಯಾವುದರ ಸರದಿ ಬರುತ್ತದೆಯೋ ಅದು ವಧಾಸ್ಥಾನಕ್ಕೆ ಹೋಗಿ, ಅದರ ಮೇಲೆ ತನ್ನ ತಲೆಯನ್ನಿಟ್ಟುಕೊಂಡು ಮಲಗಿರಲಿ. ಈ ರೀತಿ ಮಾಡುವುದರಿಂದ ಜಿಂಕೆಗಳು ಗಾಯಗೊಳ್ಳುವುದಿಲ್ಲ" ಎಂದು ಹೇಳಿದನು.

ಇನ್ನೊಂದು ಗುಂಪಿನ ರಾಜ, "ಆಗಲಿ" ಎಂದು ಒಪ್ಪಿಕೊಂಡಿತು. ಅಂದಿನಿಂದ ತನ್ನ ಸರದಿ ಬಂದ ಕೂಡಲೇ ಆ ದಿನ ಆರಿಸಲ್ಪಟ್ಟ ಜಿಂಕೆ ಹೋಗಿ, ವಧಾಸ್ಥಾನದ ಮೇಲೆ ತನ್ನ ತಲೆಯನ್ನಿಟ್ಟು ಮಲಗಿರುತ್ತಿತ್ತು. ಅಡಿಗೆಯವನು ಬಂದು, ಅಲ್ಲಿ ಮಲಗಿರುತ್ತಿದ್ದ ಜಿಂಕೆಯನ್ನು ಕತ್ತರಿಸಿ, ಅಡಿಗೆಯ ಮನೆಗೆ ತೆಗೆದುಕೊಂಡು ಹೋಗುತ್ತಿದ್ದ.

ಒಂದು ದಿನ ಶಾಖಾಮೃಗದ ಗುಂಪಿನಲ್ಲಿ ಒಂದು ಗರ್ಭಿಣಿಯಾದ ಜಿಂಕೆಯ ಸರದಿ ಬಂದಿತು. ಅದು ಶಾಖಾಮೃಗದ ಬಳಿ ಬಂದು "ಸ್ವಾಮಿ! ನಾನು ಗರ್ಭಿಣಿ. ಮಗುವಿನ ಜನನವಾದ ಮೇಲೆ ನಾವಿಬ್ಬರೂ ಸರದಿಯ ಮೇಲೆ ಹೋಗುತ್ತೇವೆ. ಇಂದು ನನ್ನ ಬದಲು ಬೇರೆ ಯಾರನ್ನಾದರೂ ಕಳುಹಿಸು" ಎಂದು ಹೇಳಿತು. ಆದರೆ ಅದರ ರಾಜ, "ನಾನು ನಿನ್ನ ಬದಲು ಬೇರೆ ಯಾರನ್ನೂ ಕಳುಹಿಸಲಾರೆ" ಎಂದು ಉತ್ತರಿಸಿದನು.

ಶಾಖಾಮೃಗ ದಯೆಯನ್ನು ತೋರಿಸದಿದ್ದುದನ್ನು ಕಂಡು ಆ ಗರ್ಭಿಣಿ ಜಿಂಕೆಯು ಬೋಧಿಸತ್ವನ ಬಳಿಗೆ ಹೋಯಿತು ಮತ್ತು ವಿಷಯವನ್ನು ತಿಳಿಸಿತು. ಅವನು ಅದರ ಮಾತು ಕೇಳಿ, "ಒಳ್ಳೆಯದು, ನೀನು ಹೋಗು, ನಿನ್ನ ಸರದಿಯನ್ನು ಬದಲಾಯಿಸುವೆನು" ಎಂದು ಹೇಳಿ ತಾನೇ ಹೋಗಿ ವಧಾಸ್ಥಾನದಲ್ಲಿ ತಲೆಯನ್ನಿಟ್ಟು ಮಲಗಿ ಕೊಂಡನು. ಅಡಿಗೆಯವನು ಅದನ್ನು ಕಂಡು ಅಭಯವನ್ನು ಪಡೆದಿರುವ ಜಿಂಕೆಯ ರಾಜನು ವಧಾಸ್ಥಾನದ ಮೇಲಿರಲು ಕಾರಣ ವೇನು? ಎಂದು ಯೋಚಿಸಿದನು. ಶೀಘ್ರವಾಗಿ ರಾಜನ ಬಳಿಗೆ ಬಂದು ಈ ವಿಷಯವನ್ನು ತಿಳಿಸಿದನು. ರಾಜನು ಕೂಡಲೇ ರಥ ವನ್ನೇರಿ ತನ್ನ ಪರಿವಾರದೊಂದಿಗೆ ಬಂದು ಬೋಧಿಸತ್ವನನ್ನು ಕಂಡು "ಸೌಮ್ಯ! ನಿನಗೆ ನಾನು ಅಭಯದಾನ ಮಾಡಿರಲಿಲ್ಲವೇ? ಇಲ್ಲಿ ನೀನು ಏಕೆ ಹೀಗೆ ಮಲಗಿದ್ದೀಯೆ?" ಎಂದು ಕೇಳಿದ.

"ಮಹಾರಾಜ! ನನ್ನ ಸರದಿಯನ್ನು ಬೇರೆ ಯಾರಿಗಾದೂ ಹಾಕು ಎಂದು ಒಂದು ಗರ್ಭಿಣಿ ಜಿಂಕೆ ಕೇಳಿತು. ನನಗೆ ಒಂದರ ಮರಣ ದುಃಖವನ್ನು ಬೇರೆ ಇನ್ನೊಂದರ ಮೇಲೆ ಹಾಕಲು ಸಾಧ್ಯವಾಗದು. ಆದುದರಿಂದ ಅದಕ್ಕೆ ನಾನು ಜೀವದಾನ ಮಾಡಿದ್ದೇನೆ. ಅದು ಪಡೆಯಬೇಕಾಗಿದ್ದ ಸಾವನ್ನು ನಾನು ಪಡೆಯಲಿಕ್ಕೆಂದು ಇಲ್ಲಿ ಬಂದು ಮಲಗಿದ್ದೇನೆ" ಎಂದು ಬೋಧಿಸತ್ವನು ಹೇಳಿದನು.

"ಸ್ವರ್ಣವರ್ಣದ ಮೃಗರಾಜ! ಕ್ಷಮೆ, ಮೈತ್ರಿ ಮತ್ತು ದಯೆ ಯಿಂದ ಕೂಡಿದ ನಿನ್ನಂಥವರನ್ನು ಮನುಷ್ಯಕುಲದಲ್ಲಿಯೂ ನಾನು ಕಂಡಿಲ್ಲ! ನಿನ್ನ ಬಗ್ಗೆ ನಾನು ಪ್ರಸನ್ನನಾಗಿದ್ದೇನೆ. ಏಳು, ನೀನು ಮತ್ತು ಆ ಗರ್ಭಿಣಿ ಜಿಂಕೆ – ಇಬ್ಬರಿಗೂ ನಾನು ಅಭಯ ನೀಡು ತ್ತೇನೆ" ಎಂದು ರಾಜ ಹೇಳಿದ.

"ಮಹಾರಾಜ! ನಮ್ಮಿಬ್ಬರಿಗೆ ಮಾತ್ರ ಅಭಯ ದೊರೆಯಿತು. ಉಳಿದವುಗಳ ಗತಿ ಏನು?"

"ಓ ಮೃಗರಾಜ! ಉಳಿದ ಮೃಗಗಳಿಗೂ ನಾನು ಅಭಯ ನೀಡುತ್ತೇನೆ."

"ಮಹಾರಾಜ! ಇದರಿಂದ ಕೇವಲ ಉದ್ಯಾನವನದಲ್ಲಿರುವ ಜಿಂಕೆಗಳಿಗೆ ಮಾತ್ರ ಅಭಯ ದೊರೆಯುವುದು, ಉಳಿದವುಗಳ ಗತಿ ಏನು?"

(ಸೂಚನೆ : ಈ ಕಥೆಯಲ್ಲಿ ಮೃಗ ಎಂದರೆ ಜಿಂಕೆ ಎಂದರ್ಥ)

"ಮೃಗರಾಜ! ನಾನು ಅವುಗಳಿಗೂ ಅಭಯ ನೀಡುತ್ತೇನೆ."


"ಮಹಾರಾಜ! ಜಿಂಕೆಗಳಿಗೇನೋ ಅಭಯ ಸಿಕ್ಕಿತು. ಉಳಿದ ಚತುಷ್ಪಾದಿಗಳ (ನಾಲ್ಕು ಕಾಲುಗಳುಳ್ಳ ಪ್ರಾಣಿಗಳ) ಗತಿ ಏನು?"

"ಮೃಗರಾಜ! ಅವುಗಳಿಗೂ ನಾನು ಅಭಯದಾನ ಮಾಡುತ್ತೇನೆ."

"ಮಹಾರಾಜ! ಚತುಷ್ಪಾದಿಗಳಿಗೆ ಅಭಯ ಸಿಕ್ಕಿತು. ಪಕ್ಷಿಗಳ ಗತಿ ಏನು?"

"ಮೃಗರಾಜ! ಅವುಗಳಿಗೂ ಅಭಯ ದಾನ ಮಾಡುತ್ತೇನೆ."

"ಮಹಾರಾಜ! ಪಕ್ಷಿಗಳು ಅಭಯ ಪಡೆದವು. ನೀರಿನಲ್ಲಿರುವ ಪ್ರಾಣಿಗಳ ಗತಿ ಏನು?"



"ಮೃಗರಾಜ! ಅವುಗಳಿಗೂ ಅಭಯದಾನ ನೀಡುತ್ತೇನೆ."

ಈ ರೀತಿ ಬೋಧಿಸತ್ವನು ರಾಜನಿಂದ ಎಲ್ಲ ಜೀವಿಗಳಿಗೂ ಅಭಯದಾನವನ್ನು ಯಾಚಿಸಿದನು. ಅನಂತರ ಎದ್ದುನಿಂತು, ರಾಜನಿಗೆ ಈ ರೀತಿ ಉಪದೇಶ ಮಾಡಿದನು: "ಮಹಾರಾಜ! ಧರ್ಮವನ್ನು ಪಾಲಿಸು, ನ್ಯಾಯಪರನಾಗು, ತಂದೆ, ತಾಯಿ, ಮಗ, ಮಗಳು, ಬ್ರಾಹ್ಮಣ, ಮನೆಯೊಡೆಯ, ಪಟ್ಟಣ ಹಾಗೂ ಜನಪದದ ಎಲ್ಲ ಜನರೊಂದಿಗೆ ಧರ್ಮದಿಂದ ವ್ಯವಹಾರ ಮಾಡು. ಇದರಿಂದ ಶರೀರ ತ್ಯಾಗ ಮಾಡಿದ ಮೇಲೆ, ಸ್ವರ್ಗಲೋಕವನ್ನು ಪಡೆಯುತ್ತೀಯೆ." ಬುದ್ಧನ ಅವತಾರಕ್ಕೆ ಮಾತ್ರ ಉಂಟಾಗುವ ಸಾಮರ್ಥ್ಯದಿಂದ ಹೀಗೆ ಆ ಮೃಗರಾಜನು ಧರ್ಮೋಪದೇಶ ಮಾಡಿದನು. ನಂತರ, ಅನೇಕ ದಿನಗಳು ರಾಜನ ಉದ್ಯಾನವನದಲ್ಲಿದ್ದು, ಜಿಂಕೆಗಳ ಸಮೂಹ ದೊಂದಿಗೆ ತನ್ನ ಅರಣ್ಯಕ್ಕೆ ಹೊರಟುಹೋದನು.

ಹೀಗೆ ರಾಜನಿಂದ ಅಭಯವನ್ನು ಪಡೆದ ಜಿಂಕೆಗಳು ಮನುಷ್ಯರ ಹೊಲಗಳ ಬೆಳೆಯನ್ನು ತಿನ್ನತೊಡಗಿದವು. ಮನುಷ್ಯರು "ಇವು ಅಭಯದಾನ ಪಡೆದ ಮೃಗಗಳು" ಎಂದು ಅವುಗಳನ್ನು ಹೊಡೆಯುತ್ತಲೂ ಇರಲಿಲ್ಲ, ಓಡಿಸುತ್ತಲೂ ಇರಲಿಲ್ಲ. ಅವರೆಲ್ಲ ರಾಜಸಭೆಗೆ ಹೋಗಿ, ರಾಜನಲ್ಲಿ ದೂರು ಹೇಳಿದರು. ಆಗ ರಾಜ ಉತ್ತರ ಕೊಟ್ಟ: "ನಾನು ಸಂತೋಷದಿಂದ ಆ ಶ್ರೇಷ್ಠ ಮೃಗರಾಜನಿಗೆ ವರದಾನ ಮಾಡಿದ್ದೇನೆ. ನಾನು ರಾಜ್ಯವನ್ನು ಬಿಡಬಲ್ಲೆ, ಆದರೆ ನನ್ನ ಪ್ರತಿಜ್ಞೆಯನ್ನು ಮುರಿಯಲಾರೆ. ಹೋಗಿ, ಹೋಗಿ. ನನ್ನ ರಾಜ್ಯದಲ್ಲಿ ಜಿಂಕೆಗಳನ್ನು ಹೊಡೆಯಲು ಯಾರಿಗೂ ಅನುಮತಿಯಿಲ್ಲ."

ಬೋಧಿಸತ್ವ ಆ ಸಮಾಚಾರ ಕೇಳಿ, ಜಿಂಕೆಗಳನ್ನು ಒಟ್ಟುಗೂಡಿಸಿ, "ಇಂದಿನಿಂದ ಬೇರೆಯವರ ಹೊಲಕ್ಕೆ ಮೇಯಲು ಹೋಗಬೇಡಿ" ಎಂದು ಹೇಳಿದನು. ಹಾಗೂ, "ಇಂದಿನಿಂದ ಬೆಳೆಯುವ ಹೊಲಗಳ ರಕ್ಷಣೆಗಾಗಿ ಬೇಲಿಯನ್ನು ಹಾಕಬೇಡಿ. ಕೇವಲ ಹೊಲಗಳಲ್ಲಿ ಎಲೆಗಳ ಗುರುತನ್ನು ಮಾತ್ರ ಮಾಡಿ" ಎಂದು ಮನುಷ್ಯರಿಗೆ ಹೇಳಿಕಳುಹಿಸಿದನು. ಅಂದಿನಿಂದ ಹೊಲಗಳಲ್ಲಿ, ಎಲೆಗಳ ಗುರುತನ್ನು ಮಾಡುವ ಪದ್ಧತಿ ಆರಂಭವಾಯಿತು. ಅಂದಿನಿಂದ ಯಾವೊಂದು ಜಿಂಕೆಯೂ ಎಲೆಯ ಗುರುತನ್ನು ದಾಟುತ್ತಿರಲಿಲ್ಲ. ಏಕೆಂದರೆ ಬೋಧಿಸತ್ವ ಹಾಗೆ ಮಾಡುವಂತೆ ಉಪದೇಶ ಮಾಡಿದ್ದ. ಈ ರೀತಿ ಜಿಂಕೆಯ ಸಮೂಹಕ್ಕೆ ಉಪದೇಶ ನೀಡಿ, ಬೋಧಿಸತ್ವ ತನ್ನ ಆಯಸ್ಸು ಇರುವವರಿಗೆ ಜೀವಿಸಿ, ಪರಲೋಕಕ್ಕೆ ಹೋದನು. ರಾಜ ಕೂಡ ಬೋಧಿಸತ್ವನ ಉಪದೇಶಕ್ಕೆ ಅನುಗುಣವಾಗಿ ಪುಣ್ಯಕರ್ಮಗಳನ್ನು ಮಾಡಿ, ಕಡೆಗೆ ತನ್ನ ಕರ್ಮಾನುಸಾರ ಪರಲೋಕವಾಸಿಯಾದನು. ▪

**ಪ್ರಿಯ ಓದುಗರಿಗೊಂದು ಸದವಕಾಶ**

**ಓದುಗರ ವೇದಿಕೆ**

**ಆದರ್ಶ ಕುಟುಂಬ**

ಸಮಾಜದ ಬಹು ಮುಖ್ಯ ಘಟಕವೇ ಕುಟುಂಬ. ಸಾಮಾಜಿಕ ಸುವ್ಯವಸ್ಥೆಗೆ ವ್ಯವಸ್ಥಿತ ಕುಟುಂಬ ಜೀವನ ಅತ್ಯಾವಶ್ಯಕ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ವಿಷಯ. ಆದರೆ ಇಂದಿನ ತಾಂತ್ರಿಕ ಯುಗದಲ್ಲಿ, ಧಾವಂತ ಸಮಾಜದಲ್ಲಿ ಕುಟುಂಬವ್ಯವಸ್ಥೆ ಸಡಿಲಗೊಳ್ಳುತ್ತಿದೆ. ಇಂದಿನ ಈ ಬದಲಾದ ಪರಿಸ್ಥಿತಿಯಲ್ಲಿ, **'ಆದರ್ಶ ಕುಟುಂಬ ಎಂದರೆ ಹೇಗಿರಬೇಕು?'** ಎಂಬ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಸಹ ಓದುಗರೊಡನೆ ಹಂಚಿಕೊಳ್ಳಿ. ಈ ವಿಷಯಕ್ಕೆ ಸಂಬಂಧಿಸಿದಂತೆ, ಒಂದು ಕಿರು ಪ್ರಬಂಧವನ್ನು ಬರೆದು ನಮಗೆ ಕಳಿಸಿಕೊಡಿ. ಪ್ರಬಂಧವು ಸುಮಾರು 200 ಪದಗಳ ಮಿತಿಯೊಳಗೆ ಇರಬೇಕು. ಉತ್ತಮ ಪ್ರಬಂಧಗಳನ್ನು ಆಯ್ದು ವಿವೇಕಪ್ರಭದಲ್ಲಿ ಪ್ರಕಟಿಸಲಾಗುತ್ತದೆ. ಬರಹಗಳನ್ನು 1.7.2008 ರ ಒಳಗೆ ನಮಗೆ ತಲುಪುವಂತೆ ಕಳಿಸಬೇಕು.

ಈ ಸದವಕಾಶವನ್ನು ಉಪಯೋಗಿಸಿಕೊಳ್ಳಿ. ನಿಮ್ಮ ಚಿಂತನಾ ಶಕ್ತಿಯನ್ನು ಮತ್ತು ಬರವಣಿಗೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶ! ನಿಮ್ಮ ಪ್ರಬಂಧವನ್ನು ಈ ವಿಳಾಸಕ್ಕೆ ಕಳಿಸಿಕೊಡಿ:

**ಸಂಪಾದಕರು, 'ವಿವೇಕಪ್ರಭ', 'ಓದುಗರ ವೇದಿಕೆ'**
**ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು 570 020**